


International Journal of Kannada Research
www.kannadajournal.com

**ISSN: 2454–5813**
IJSR 2017; 3(1): 99-103
© 2017 IJKS
www.kannadajournal.com
Received: 19-11-2016
Accepted: 20-12-2016

**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ, ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

**ಬೋಜಮ್ಮ ಕೆ. ಎನ್**
ಸಹಾಯಕ ಪ್ರಾಧ್ಯಾಪಕರು, ಶ್ರೀ. ಧ. ಮಂ. ಕಾಲೇಜು, ಉಜಿರೆ

**Correspondence**
**ಮೈತ್ರಿ ಭಟ್**
ಸಂಶೋಧನ ವಿದ್ಯಾರ್ಥಿ, ಎಸ್. ವಿ. ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

# ವಚನಗಳಲ್ಲಿ ಸಸ್ಯ ರೂಪಕ ಕದಳಿ ಹಾಗೂ ಮನಸ್ಸಿನ ಶೋಧನೆ

**ಮೈತ್ರಿ ಭಟ್, ಬೋಜಮ್ಮ ಕೆ. ಎನ್**

ವಚನಯುಗ ಕರ್ನಾಟಕದ ಸಾಂಸ್ಕೃತಿಕ ಹಾಗೂ ಸಾಹಿತ್ಯದ ದೃಷ್ಟಿಯಿಂದ ಅತ್ಯಂತ ಮಹತ್ವದ ಬದಲಾವಣೆಗಳಿಗೆ ನಾಂದಿಯನ್ನು ಹಾಡಿದ ಕಾಲ. ವಚನಕಾರರು ತಮ್ಮ ಭಾವಾಭಿವ್ಯಕ್ತಿಗೆ ಭಾಷೆಯನ್ನು ದುಡಿಸಿಕೊಂಡಂತೆಯೇ ರೂಪಕ ಸಂಪತ್ತನ್ನೂ ಬಳಸಿಕೊಂಡ ವಿಚಾರವು ಸರ್ವವಿದಿತವಾದುದು. ತಾವು ಸಮಾಜದಲ್ಲಿ ಕಂಡ ವಿಷಯಗಳನ್ನು ತಮ್ಮ ಅಂತರಾಳದಲ್ಲಿ ತುಡಿದ ಭಾವನೆಗಳನ್ನು ಸಮರ್ಪಕವಾಗಿ ತಿಳಿಸಲು ನಿರ್ಮಾಣ ಮಾಡಿದ ರೂಪಕಗಳು ಬೆರಗುಗೊಳಿಸುವಂತಹುದು. ಪ್ರಾಣಿ–ಪಕ್ಷಿ–ಸಸ್ಯಗಳನ್ನು ರೂಪಕಗಳನ್ನಾಗಿ ಬಳಸಿಕೊಂಡು ವಿಷಯ ನಿರೂಪಣೆ ಮಾಡಿದ ಅನೇಕ ವಚನಗಳನ್ನು ನಾವು ಗುರುತಿಸಬಹುದು. ಅನೇಕ ಬಗೆಯ ಅನುಭವಗಳಿಗೆ, ಭಾವನೆಗಳಿಗೆ ಸಸ್ಯ ರೂಪಕಗಳನ್ನು ಬಳಸಿ ಮಾನವ ಸ್ವಭಾವ, ಅಂತರಂಗವನ್ನು ಅತ್ಯಂತ ನಿಪುಣತೆಯಿಂದ ವ್ಯಾಖ್ಯಾನಿಸಿದ್ದಾರೆ. ಇವು ಅಭಿವ್ಯಕ್ತಿಯನ್ನು ಮೊನಚುಗೊಳಿಸಲು ಸಹಕರಿಸುತ್ತವೆ.

**ವಚನಗಳಲ್ಲಿ ಸಸ್ಯ ಜಾನಪದ:**
ಬಸವಾದಿ ಶರಣರು ತಮ್ಮ ಪರಿಸರದ ಸಸ್ಯ ಸಂಪತ್ತನ್ನು ತುಂಬ ಅರ್ಥಪೂರ್ಣವಾಗಿ ವಚನಗಳಲ್ಲಿ ಬಳಸಿದ್ದಾರೆ. ವಚನಗಳಲ್ಲಿ ನೂರಾರು ಸಸ್ಯಗಳ ಉಲ್ಲೇಖಗಳನ್ನು ನಾವು ಕಾಣಬಹುದಾಗಿದೆ: ಗಿಡ–ಮರ–ಬಳ್ಳಿಗಳಾದ ತಾಳಮರ, ನಾರಿವಾಣ, ಹುಣಸೆ, ಬೂರುಗ, ಅರಳಿ, ವಿಷ್ಣುಕಾಂತಿ, ಬನ್ನಿ, ಮತ್ತಕ, ತುಳಸಿ, ತೆಂಗು, ಹಿರಿಯಾಲ, ಆಲ, ಅರಳೆ, ಕರ್ಪೂರ, ಕಳ್ಳಿ, ಶ್ರೀಗಂಧ, ಬೇವು, ಜಾಲಿ, ಚಂದನ, ದತ್ತೂರ, ಕಬ್ಬು ಮುಂತಾದುವು. ಹೂವು–ಕಾಯಿ–ಹಣ್ಣುಗಳಾದ ಕಣಗಿಲೆ, ಮೊಲ್ಲೆ, ಮಲ್ಲಿಗೆ, ಸೇವಂತಿಗೆ, ಕಮಲ, ತಾವರೆ, ಸಂಪಿಗೆ, ಬೆಳವಲಕಾಯಿ, ತೆಂಗು, ಎಕ್ಕೆ, ಪಡುವಲ, ಕುಂಬಳ, ಬದನೆ, ಬೆಟ್ಟದ ನೆಲ್ಲಿಕಾಯಿ, ಕಸುಗಾಯಿ, ಕದಳೀ, ಹಲಸು, ನೀರುಳ್ಳಿ, ಅತ್ತಿಯ ಹಣ್ಣು, ತಾಳೆ ಹಣ್ಣು, ಬಾಳೆ, ಈಳೆ, ನಿಂಬೆ, ಮಾವು, ಮಾದಲ, ನೇರಳೆ ಇತ್ಯಾದಿ ರೂಪಕಗಳನ್ನು ತಮ್ಮ ವಚನಗಳಲ್ಲಿ ಸಮರ್ಥವಾಗಿ ಬಳಸಿಕೊಂಡಿದ್ದಾರೆ.
ದೇಹ–ವಿಷಯ ಸಂಬಂಧಗಳ ನಿರೂಪಣೆಗಾಗಿ ಅಕ್ಕಮಹಾದೇವಿ, ಅಲ್ಲಮಪ್ರಭು ಮೊದಲಾದವರು ಸಸ್ಯ ರೂಪಕಗಳಲ್ಲಿ ವಿಶೇಷವಾದ 'ಕದಳಿ' ಪದವನ್ನು ಪ್ರಯೋಗಿಸಿರುವುದು ಕಂಡು ಬರುತ್ತದೆ. ಕದಳಿಯ ಉಪಯುಕ್ತತೆಯನ್ನು ಅರಿತು ಆ ಮೂಲಕ ದೇಹವನ್ನು, ವಿಷಯವನ್ನು ಮೀರಬೇಕಾದುದನ್ನು ಚಿತ್ರಿಸುತ್ತಾರೆ.

**ಪದಕೋಶಗಳಲ್ಲಿ ಕದಳಿ ಕುರಿತ ವಿವರಗಳು:**
**ವೀರಶೈವ ಪಾರಿಭಾಷಿಕ ಪದಕೋಶ:**
ಕದಳಿ (ನಾ). ಈಗಿನ ತೆಲಂಗಾಣದ ಕರ್ನೂಲು ಜಿಲ್ಲೆಯ ಶ್ರೀಶೈಲ ಪರ್ವತಾವಳಿಯ ಒಂದು ಪುಣ್ಯಕ್ಷೇತ್ರ. ಇದು ತಪಸ್ಸಿಗೆ ಯೋಗ್ಯವಾದ ಏಕಾಂತ ಸ್ಥಳವಾಗಿದ್ದು ಇದನ್ನು ಗುಪ್ತಕದಳಿ ಎಂದೂ ಕರೆಯುತ್ತಾರೆ. ವಚನಗಳಲ್ಲಿ ಕದಳಿ ಎಂಬ ಶಬ್ದಕ್ಕೆ ಬಾಳೆ ಎಂಬ ವಸ್ತುನಿಷ್ಠ ಅರ್ಥಕ್ಕಿಂತ ಕಾಯ, ಸಂಸಾರ, ಹೃದಯಕಮಲ, ಭವಾರಣ್ಯ ಮೊದಲಾದ ಭಾವಪ್ರಧಾನ ಅರ್ಥಗಳು ಇವೆ.
ಉದಾ: ಕಾಯವೆಂಬ ಕದಳಿಯ ಹೊಕ್ಕು...,(ಅಲ್ಲಮ), ಕದಳಿ ಎಂಬುದು ತನು ಕದಳಿ ಎಂಬುದು ಮನ ಕದಳಿ ಎಂಬುದು ವಿಷಯಂಗಳು ಕದಳಿ ಎಂಬುದು ಭವ ಘೋರಾರಣ್ಯ....,(ಅಕ್ಕ), ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ...,(ಅಲ್ಲಮ), ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು ಕದಳಿಯ ಬನದಲ್ಲಿ ಭವಹರನ ಕಂಡೆನು (ಅಕ್ಕ), ಕರ್ಮವೆಂಬ ಕದಳಿ ಎನಗೆ ಕಾಯವೆಂಬ ಕದಳಿ ನಿಮಗೆ,,,,(ಅಕ್ಕ).

**ಕನ್ನಡ–ಕನ್ನಡ ನಿಘಂಟು:**
ಕದಲಿ–ಕದಳಿ(ನಾ) = ಬಾಳೆಗಿಡ, ಆನೆಯ ಮೇಲೆ ನಿಲ್ಲಿಸುವ ಪತಾಕೆ, ಒಂದು ಜಾತಿಯ ಜಿಂಕೆ, ಒಂದು ಜಾತಿಯ

ಬಾಳೆ, ಏಳೆಲೆವಾಳೆ, ಶಿವ, ಈಶ್ವರ, ಬಾವುಟ, ಆನೆ, ಮರ, ಕತ್ತಲೆ, ಅರಣ್ಯದ ಮಧ್ಯಭಾಗ, ವನಾಂತರ, ಮೂಲಿಕೆಗಳನ್ನು ಮಾರುವವನು, ಗಂದಿಗ, ಆಕಾಶ.

**ಕಿಟ್ಟೆಲ್ ಅವರ ಕನ್ನಡ – ಇಂಗ್ಲಿಷ್ ಕೋಶ:**
ಕದಲಿ = ಬಾಳೇ, ಪತಾಕೆ, ಏಳೆಲೆವಾಳೆ, ಭೂಜ ವೃಕ್ಷ, ಶಿವ, ಈಶ್ವರ, ಗಗನ, ಆಕಾಶ, ಸಾಮಜ, ಆನೆ, ಮೂಲಿಗ, ಮೂಲಿಕೆಗಳ ಮಾರುವವನು, ತಮ, ಕತ್ತಲೆ, ವನಾನ್ತರ, ಅರಣ್ಯಮಧ್ಯ,

**ಡಾ. ಸಾ. ಶಿ. ಮರುಳಯ್ಯನವರ ಪ್ರಕಾರ:**
ಕದಳೀ = ಮಾರ್ಗ (ಶರಣ ಶರಣೆಯರು ಕ್ರಮಿಸಿದ ಹಾದಿ)
= ಕಾಯ/ಅಂಗ (ತನು)

1. ಶರಣ ಶರಣೆಯರು ಕ್ರಮಿಸಿದ ಹಾದಿ: ಅಕ್ಕ ಹೇಳುವ 'ಕರ್ಮವೆಂಬ ಕದಳಿ ಎನಗೆ ಕಾಯವೆಂಬ ಕದಳಿ ನಿಮಗೆ...' ಈ ವಚನದ ಪ್ರಕಾರ ಕದಳಿ ಎಂಬುದು ಶರಣ ಶರಣೆಯರು ಮೋಕ್ಷದೆಡೆಗೆ ಸಾಗಲು ತಾವಾಗಿಯೇ ಆಯ್ದುಕೊಂಡ ವೈಯಕ್ತಿಕ ಮಾರ್ಗ.
2. ಕಾಯ: ಶರಣ ಧರ್ಮದಲ್ಲಿ ಕಾಯ/ಶರೀರಕ್ಕೆ ತುಂಬಾ ಮಹತ್ವದ ಸ್ಥಾನವಿದೆ. ಅವರು ದೇವರನ್ನು ಹೊಂದಲು ಬೇಕಾಗುವ ಪೂರ್ವಸಿದ್ಧತೆಯ ಸಾಧನವಾಗಿ ಕಾಯವನ್ನು ಪರಿಗಣಿಸುತ್ತಾರೆ. ಅವರಿಗೆ ಕದಳಿಯೆಂದರೆ ಕಾಯ/ತನುವಲ್ಲದೆ ಬೇರೆಯಲ್ಲ. ಕದಳಿಯೇ ಕಾಯ, ಕಾಯವೇ ಕದಳಿ. ಸಕಲ ಸಿದ್ಧಿಗೂ ದೇಹವೇ ಸಾಧನವಾದುದರಿಂದ ಅದನ್ನಾಧರಿಸಿಯೇ ಶಿವಜ್ಞಾನವನ್ನು ಪಡೆಯಬೇಕು.

**ನವಕಲ್ಯಾಣ ಮಠದ ಶ್ರೀಕುಮಾರಸ್ವಾಮಿಗಳು ಅಭಿಪ್ರಾಯ ಪಡುವಂತೆ:**
"ಶಿವಶರಣರು ಜೀವನದ ಪರಮಾದರ್ಶವನ್ನು ಆ ಬಾಳಬಟ್ಟೆಯ ಪರಮಾಗಮವನ್ನು ಕದಳಿ ಎಂಬ ಒಂದು ಪದದಿಂದ ಸೂಚಿಸುವರು."

**'ಕದಳಿ'** ಅಕ್ಕಮಹಾದೇವಿ, ಅಲ್ಲಮಪ್ರಭುಗಳ ಜೀವನ ಹಾಗೂ ವಚನಗಳಲ್ಲಿ ತನ್ನದೇ ಆದ ವಿಶಿಷ್ಟ ಅರ್ಥವನ್ನು ಪಡೆದಿದೆ. ಅವರೊಂದಿಗೆ ಇನ್ನಿತರ ಕೆಲವು ಶರಣ–ಶರಣೆಯರು ಕದಳಿಯನ್ನು ಪ್ರಸ್ತಾಪಿಸಿರುವುದನ್ನು ಕಾಣಬಹುದು. ಬಸವಣ್ಣನವರು ತಮ್ಮ ವಚನಗಳಲ್ಲಿ 'ಕದಳಿ' ಎಂಬ ಪದವನ್ನು ಪ್ರಯೋಗಿಸಿಲ್ಲ. ಆದರೆ 'ಬಾಳೆ' ಎಂಬ ಪದವನ್ನು ಪ್ರಯೋಗಿಸಿದ್ದಾರೆ. 'ಕದಳಿ' ಎಂಬ ಸಂಸ್ಕೃತ ಪದಕ್ಕೆ ಪರ್ಯಾಯವಾಗಿ 'ಬಾಳೆ' ಎಂಬ ಅಚ್ಚ ಕನ್ನಡ ಪದವನ್ನು ಬಳಸಿದ್ದಾರೆ.

'ಕದಳಿ' ಎಂಬುದನ್ನು ಶಿವಶರಣರು ಅನೇಕ ಅರ್ಥದಲ್ಲಿ ಬಳಸಿದ್ದಾರೆ. ಸಂದರ್ಭಕ್ಕೆ ತಕ್ಕಂತೆ ಇದರ ಅರ್ಥ ಬೇರೆಯಾಗುತ್ತದೆ. ಕದಳಿಯ ಪದಪ್ರಯೋಗ ಅಕ್ಕ ಅಲ್ಲಮನಲ್ಲಿ "ಎನ್ನಂಗದ ಅವಸಾನದೆಡೆ ಯಾವುದು" ಎಂದು ಕಲ್ಯಾಣದಲ್ಲಿ ತನ್ನ ಲಿಂಗೈಕ್ಯದ ಕಾಲ, ಸ್ಥಳ ಯಾವುದೆಂದು ಪ್ರಶ್ನಿಸಿದಾಗ ಹೇಳಿದ ವಚನದಿಂದ ಪ್ರಾರಂಭವಾಗುತ್ತದೆ.

'ಕರ್ಮವೆಂಬ ಕದಳಿ ಎನಗೆ
ಕಾಯವೆಂಬ ಕದಳಿ ನಿಮಗೆ
ಮಾಟವೆಂಬ ಕದಳಿ ಬಸವಣ್ಣಂಗೆ
ಭಾವವೆಂಬ ಕದಳಿ ಚೆನ್ನಬಸವಣ್ಣಂಗೆ
ಬಂದ ಬಂದ ಭಾವ ಸಲೆ ಸಂದಿತು
ಎನ್ನಂಗದ ಅವಸಾನವ ಹೇಳಾ ಚನ್ನಮಲ್ಲಿಕಾರ್ಜುನಾ'

ಮನುಷ್ಯ ಬದುಕಿನಲ್ಲಿ ಅನುಭವಿಸುವ ಘಟನೆಗಳು ಕರ್ಮವನ್ನು ಅವಲಂಬಿಸಿವೆ. ಕದಳಿ ಎಂದರೆ ಬಾಳೆ. ಬಾಳೆ ಎಂದರೆ ನಾನು ಬಾಳಲಾರೆ ಎಂದರ್ಥ. ಇಲ್ಲಿ ಅಕ್ಕ ಹೇಳುತ್ತಾಳೆ: ಕರ್ಮವು ನನಗೆ ಬಾಳೆ. ಅಂದರೆ ನನಗೆ ಕರ್ಮವಿಲ್ಲ. ನಿರಾಕಾರ ಶಿವನಿಗೆ ಕಾಯವು ಬಾಳೆ. ಮಾನವ ಶರೀರದಲ್ಲಿಯೇ ಶಿವನು ಕಾಣಿಸಿಕೊಳ್ಳುತ್ತಾನೆ. ಹಾಗೆಯೇ, ಮಾಟವೆಂದರೆ ಕ್ರಿಯೆ. ಶರಣರಿಗೆ ಪೂಜೆ, ಧ್ಯಾನ, ಭಕ್ತಿ, ಕ್ರಿಯೆಗಳೇ ಕರ್ಮಗಳು. ಈ ಶರೀರ ಧರಿಸಿ ಬಂದ ಮೇಲೆ ಅನುಭವಿಸಲೇಬೇಕಾದ ಕೆಲವು ಕರ್ಮಗಳಿವೆ. ಈ ಕರ್ಮಗಳನ್ನು ಅನುಭವಿಸುವ ಸಂದರ್ಭದಲ್ಲಿ ಒಳ್ಳೆಯ ಗುರುವಿನ ಮಾರ್ಗದರ್ಶನ ಅಗತ್ಯ. ಅದನ್ನು ಅಕ್ಕನು ಬಸವಣ್ಣ ಮತು ಚನ್ನಬಸವಣ್ಣನ ಸಂಗದಲ್ಲಿ ಅನುಭವಿದ್ದಾಳೆ. ಹಾಗಾಗಿ ಬಸವಣ್ಣ ತನ್ನ ಮಹಾಮನೆಯಲ್ಲಿ ದಾಸೋಹದಲ್ಲಿ ಕೃತಾರ್ಥತೆ ಸಾಧಿಸಿದ್ದು, ಹಾಗೂ ಚನ್ನಬಸವಣ್ಣ ತನ್ನ ಅರಿವಿನ ದಾರಿಯಲ್ಲಿ ಕೃತಾರ್ಥತೆ ಸಾಧಿಸಿದ್ದು ಅಕ್ಕನಿಗೆ ಬೆಳಕಾಗುತ್ತದೆ. ಬಸವಣ್ಣ ಲೋಕದಲ್ಲಿ ಭಕ್ತಿಯನ್ನು ಬೆಳೆಸುವುದಕ್ಕಾಗಿ ಅದನ್ನು ಅನುಸರಿಸಿದರೇ ಹೊರತು ಅದುವೇ ಅವರ ಗುರಿಯಲ್ಲ. ಹಾಗೆಯೇ ಚನ್ನಬಸವಣ್ಣ ಸದ್ಭಾವವನ್ನು ಮೂಡಿಸಿದರೇ ಹೊರತು ಅದುವೇ ಅವರ ಸಾಧನೆಯಲ್ಲ. ಅವರು ಭಾವವಳಿದು ನಿರ್ಭಾವ ನಿಲುವಿಗೆ ಏರಿದವರು ಮತ್ತು ಅನುಭಾವದ ನಿಲುವಿನಲ್ಲಿ ಮೆರೆದವರು. ಈ ವಚನದಲ್ಲಿ ಕದಳಿಯನ್ನು ಕರ್ಮ, ಕಾಯ, ಮಾಟ ಹಾಗೂ ಭಾವ ಎಂಬ ಅರ್ಥದಲ್ಲಿ ಬಳಸಲಾಗಿದೆ.

ಈ ವಚನಕ್ಕೆ ಉತ್ತರವೆಂಬಂತೆ ಅಲ್ಲಮನು –
'ನೀನು ನಾನೆಂಬ ಉಭಯವನಳಿದು ತಾನು–ತಾನಾದ
ತ್ರಿಕೂಟವೆಂಬ ಮಹಾಗಿರಿಯ ತುದಿಯ ಮುಟ್ಟಿ
ನೋಡಲು ಬಟ್ಟಬಯಲು ಕಾಣಬಹುದು ನೋಡಾ!
ಆ ಬಯಲ ಬೆರಸುವರೆ ಶ್ರೀಗಿರಿಯ ಮೇಲೊಂದು
ಕಾಣಬಾರದ ಕದಳಿಯುಂಟು ನೋಡಾ
ಕದಳಿಯ ಕಳೆದು ಅಲ್ಲಿ ಒಳಹೊಕ್ಕು ನೋಡಲು ತೊಳಗಿ
ಬೆಳಗುವ ಜ್ಯೋತಿಯುಂಟು ಕೇಳಾ!
ನಡೆಯಲ್ಲಿಗೆ ತಾಯೆ, ಗುಹೇಶ್ವರ ಲಿಂಗದಲ್ಲಿ ಪರಮಪದವು–
ನಿನಗೆ ಸ್ವಯಂವಹುದು ನೋಡಾ!'

ಇಲ್ಲಿ ಅಲ್ಲಮನು ಅಕ್ಕನಿಗೆ ನೀನು ನಾನು ಎಂಬ ದ್ವಂದ್ವ ಭಾವವನ್ನು ದೂರಮಾಡಿ, ಶ್ರೀಗಿರಿಯಲ್ಲಿರುವ ಕದಳಿಯ ಬನವನ್ನು ಹೊಕ್ಕು ಕಾಯವೆಂಬ ಕದಳಿಯ ಮೂಲಕ ಶಿವನನ್ನು ಸೇರುವ ಮಾರ್ಗವನ್ನು ಹೇಳುತ್ತಾನೆ. ಆಗ ಅನಂದಪರವಶಳಾದ ಅಕ್ಕ ಶ್ರೀಗಿರಿಯ ಕಡೆಗೆ ಹೆಜ್ಜೆ ಹಾಕುತ್ತಾಳೆ. ಈ ವಚನದಲ್ಲಿ ಕದಳಿಯನ್ನು ಮಾರ್ಗ, ದಾರಿ ಮತ್ತು ಕ್ರಮಿಸಿದ ಹಾದಿ ಎಂಬುದಾಗಿ ತಿಳಿಸಲಾಗಿದೆ.

ಅಲ್ಲಮನು ಹಸಿವು, ತೃಷೆ, ನಿದ್ರೆ ಮೊದಲಾದ ಕಾಯದ ವಿಕಾರಗಳನ್ನು ನಿವಾರಿಸಿ, ಮನೋವಿಕಾರಗಳಾದ ಕಾಮ, ಕ್ರೋಧ, ಮೋಹ, ಮದ, ಮತ್ಸರಗಳೆಂಬ ಅರಿಷಡ್ವರ್ಗಗಳನ್ನು ಹಾಗೂ ಅಷ್ಟಮದಗಳನ್ನು ನಿವಾರಿಸಿಕೊಳ್ಳಬೇಕಾದುದನ್ನು ಹೀಗೆ ಹೇಳಿದ್ದಾನೆ:

'ಕದಳಿಯ ಬನವ ಹೊಕ್ಕು ಹೊಲಬ ತಿಳಿಯದನ್ನಕ್ಕ
ಬಯಲ ಗಾಳಿಯ ಹಿಡಿದು ಘಟಿ ಮಾಡದನ್ನಕ್ಕ
ಬರಿದೆಬಹುದೆ ಶಿವಜ್ಞಾನ?
ಷಡುವರ್ಗವಳಿಯದನ್ನಕ್ಕ, ಅಷ್ಟಮದವಳಿಯದನ್ನಕ್ಕ
ಬರಿದೆಬಹುದೆ?
ಮದಮತ್ಸರ ಮಾಡಲು ಇಲ್ಲ, ಹೊದಕುಳಿಗೊಳಲೂ ಇಲ್ಲ
ಗುಹೇಶ್ವರಲಿಂಗ ಕಲ್ಪಿತದೊಳಿಲ್ಲ!'

– ಇಲ್ಲಿ ಅಲ್ಲಮನು ಕದಳಿಯ ಬನದಂತಿರುವ ನಮ್ಮ ಕಾಯವು ಷಡ್ವರ್ಗ, ಅಷ್ಟಮದಕ್ಕೆ ಆಶ್ರಯವಾಗಿದೆ. ಅದು ಅಳಿಯುವ ತನಕ ಶಿವಜ್ಞಾನ ಪ್ರಾಪ್ತವಾಗದು ಎಂದು ಹೇಳುತ್ತಾನೆ. ಇಲ್ಲಿ ಕದಳಿಯನ್ನು ಕಾಯಕ್ಕೆ ಹೋಲಿಸಲಾಗಿದೆ. ಇದನ್ನೇ ಮುಂದುವರಿಸಿ ತಮ್ಮ ಮತ್ತೊಂದು ವಚನದಲ್ಲಿ, ಕಾಯ ವಿಕಾರಗಳನ್ನು ತೊರೆಯುವ ತನಕ ನಿರಾಳವಾಗಲು ಸಾಧ್ಯವಿಲ್ಲ. ಆದರೆ ಇದು ಆಡಿದಷ್ಟು ಸುಲಭವಲ್ಲ. ಆದರೆ ಅಸಾಧ್ಯವೇನಲ್ಲ ಎಂಬುದನ್ನು –

'ಕಾಯವೆಂಬ ಮಹಾ ಕದಳಿಯ ಗೆಲ್ಲಬಲ್ಲವರನಾರನೂ ಕಾಣೆ!
ಸಂಸಾರವೆಂಬ ಸಪ್ತ ಸಮುದ್ರ ಬಳಸಿ ಬಂದಿಪ್ಪವು
ಭವವೆಂಬ ಮಹಾರಣ್ಯದೊಳು ಪಂಚೇಂದ್ರಿಯವೆಂಬ
ವಿಷದ ಮಳೆ ಸುರಿವುತಿಪ್ಪುದು
ಕೋಪವೆಂಬ ಪೆರ್ಬುಲಿ ಮೊರೆವುತ್ತಿಪ್ಪುದು
ಅಷ್ಟಮದವೆಂಬ ಮದಗಜಂಗಳು ಬೀದಿವರಿಯುತ್ತಿಪ್ಪುವು
ಕಾಮವೆಂಬ ಕೆಂಡದ ಮಳೆ ಅಡಿಯಿಡಬಾರದು
ಮತ್ಸರವೆಂಬ ಮಹಾ ಸರ್ಪಂಗಳು ಕಿಡಿಯನುಗುಳುತ್ತಿಪ್ಪವು
ಆಸೆಯೆಂಬ ಪಾಪದ ಕೂಸು ಹಿಸಿಹಿಸಿದು ತಿನ್ನುತ್ತಿಪ್ಪುದು
ತಾಪತ್ರಯವೆಂಬ ಮೂರಂಬಿನ ಸೋನೆ ಸುರಿವುತ್ತಿಪ್ಪುದು
ಅಹಂಕಾರವೆಂಬ ಗಿರಿಗಳು ಅಡ್ಡಬಿದ್ದಿಪ್ಪುವು
ಪಂಚಭೂತಗಳೆಂಬ ಭೂತಂಗಳ ಭಯ ದಿಟ್ಟಿಸಬಾರದು!
ಮಾಯೆಯೆಂಬ ರಕ್ಕಸಿ ಹಸಿಯ ತಿನ್ನುತ್ತಿಪ್ಪಳು
ವಿಷಯ ಕೂಪ ಬಳಸಬಾರದು!
ಮೋಹವೆಂಬ ಬಳ್ಳಿ ಕಾಲ ಕುತ್ತಬಾರದು
ಲೋಭವೆಂಬ ಮಸೆದಾಯುಧ ಒರೆ ಹಚ್ಚಬಾರದು
ಇಂತಪ್ಪ ಕದಳಿಯ ಹೊಗಲರಿಯದೆ
ದೇವದಾನವ ಮಾನವರೆಲ್ಲರೂ ಮತಿಗೆಟ್ಟು ಮರುಳಾಗಿ
ಹೆರೆದೆಗೆದು ಓಡಿದರು
ಅಂಗಾಲ ಕಣ್ಣವರು ಮೈಯೆಲ್ಲ ಕಣ್ಣವರು ತಲೆಬಾಲಗೆಟ್ಟರು
ಆನು ಈ ಕದಳಿಯ ಹೊಕ್ಕು ಹೊಯ್ದಾಡಿ
ಮುಳ್ಳು ಮನೆ ಮುಟ್ಟದೆ ಕಳಿವರಿದು, ಗೆಲಿದು, ಉತ್ತರಿಸಿ
ಗುಹೇಶ್ವರನೆಂಬ ಲಿಂಗದ ನಿಜಸಮಾಧಿಯಲ್ಲಿ ನಿಂದು
ಪರವಶನಾಗಿ ನಿರಾಳಕ್ಕೆ ನಿರಾಳವಾಗಿದ್ದೆನಯ್ಯಾ!'

ಅವರಂತೆ ಹೀಗೆ ನಿರಾಳನಾಗುವುದು ಮಾನವ ಶಕ್ತಿಗೆ ಅಸಾಧ್ಯವೇನಲ್ಲ. ಇಲ್ಲಿ ಅವರು ಮನಸ್ಸಿನ ಮಹಾಕೂಪದಲ್ಲಿ ಅಡಗಿರುವ ಸಂಸಾರದ ಸೆಳೆತ, ವಿಷಯಸುಖ, ಕೋಪ, ಮದ, ಕಾಮ, ಮತ್ಸರ, ಆಸೆ, ಕಷ್ಟ, ಅಹಂಕಾರ, ಮೋಹ, ಲೋಭಗಳು ಸಾಧನೆಗೆ ಅಡ್ಡಿಯಾಗುವುದನ್ನು ಹಾಗೂ ಅವುಗಳನ್ನು ನಿವಾರಿಸಬೇಕಾದ ಅನಿವಾರ್ಯತೆಯನ್ನು ವಿವರಿಸಿದ್ದಾರೆ. ಅದನ್ನು ನಿವಾರಿಸಲು ಜ್ಞಾನವು ಅಗತ್ಯ. ಅದು ನಮ್ಮನ್ನು ನಾವು ಅರಿತುಕೊಳ್ಳುವಂತೆ ಮಾಡುತ್ತದೆ.
'ಅಗ್ನಿಯ ಸುಡುವಲ್ಲಿ, ಉದಕವ ತೊಳೆವಲ್ಲಿ

ವಾಯುವ ಮೆಟ್ಟಿ ಆಕಾಶವ ಹಿಡಿವಲ್ಲಿ
ಯೋಗದ ಹೊಲಬ ನೀವೆತ್ತ ಬಲ್ಲಿರೋ?
ಕದಳಿಯ ಬನವ ನಿನ್ನಲ್ಲಿ ನೀನು ತಿಳಿದು ನೋಡು
ಮದಮತ್ಸರ ಬೇಡ ಹೊದಕುಳಿಗೊಳಬೇಡ
ಗುಹೇಶ್ವರನೆಂಬ ಲಿಂಗವು ಕಲ್ಪಿತವಲ್ಲ'

ಅಕ್ಕನು ತನ್ನ ಕೊನೆಗಾಲದಲ್ಲಿ ತನ್ನ ನಿಲುವನ್ನು ತಾನೇ ವ್ಯಕ್ತಪಡಿಸುತ್ತಾಳೆ. ಲಿಂಗವು ಲಿಂಗ ರೂಪವೇ. ಅದು ಬಾಳೆ ಎಂಬುದು ಆಕೆಗೆ ಗೊತ್ತು. ಅದನ್ನು ಆಕೆಯು –

'ಕದಳಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಂಗಳು
ಕದಳಿ ಎಂಬುದು ಭವಘೋರಾರಣ್ಯ
ಈ ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆದ್ದು ಬಂದ ಮಗಳೆ ಎಂದು ಕರುಣದಿ ತೆಗೆದು
ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು'

ಕದಳಿ ಎನ್ನುವುದು ಶರೀರ, ಮನಸ್ಸು, ವಿಷಯ, ಹುಟ್ಟು–ಸಾವಿನ ಘೋರವಾದ ಕಾಡು ಎಂಬುದಾಗಿ ಇಲ್ಲಿ ಅರ್ಥೈಸಲಾಗಿದೆ. ಕದಳಿ ಎಂದರೆ ಬಾಳೆಯ ವನ. ಈ ಕದಳಿ ಎಂಬುದು ಸುಕೋಮಲ ಮಾನವ ತನು. ಕದಳಿ ಎಂಬುದು ಸದಾ ಹಸಿರಿರುವ ತಂಪಿನ ವನ. ಕದಳಿ ಎಂಬುದು ಪ್ರೀತಿ, ವಾತ್ಸಲ್ಯ, ಮೋಹ, ಆಸೆ ತುಂಬಿದ ವಿಷಯಗಳ ಆಗರ. ಇಂತಹ ಕದಳಿ ಎಂಬುದನ್ನು ಜಯಿಸಿ ಬದುಕಿ ಬಂದೆನು ಎಂದರೆ ನಶ್ವರತ್ವವನ್ನು ನಾಶಮಾಡಿ ಶರಣ ಮಾರ್ಗದಿಂದ ಪ್ರಸಾದ ಕಾಯಳಾಗಿ ಶಾಶ್ವತವಾದ ಇರುವಿಕೆಯನ್ನು ಹೊಂದಿದೆನು ಎಂಬ ಭಾವ. ಇಲ್ಲಿ ದೇಹ ಮತ್ತು ಪ್ರಾಣವೇ ಮೊದಲಾದವುಗಳು ನಿರಾಕಾರ ಪರಶಿವನ ರೂಪಗಳೆನಿಸಿಕೊಂಡು ಶ್ರೀಶೈಲ ಕದಳಿಯ ವನದಲ್ಲಿ ಜನ್ಮಜನ್ಮಾಂತರಗಳನ್ನು ಕಳಚುವ ನಿರಾಕಾರ ವಸ್ತುವನ್ನು ಕಂಡೆನು. ಆ ವಸ್ತುವು ನಾನು ಭವ(ಹುಟ್ಟು)ವನ್ನು ಪರಿಹರಿಸಿಕೊಂಡವಳೆಂದು ನನ್ನನ್ನು ಆಲಂಗಿಸಿಕೊಂಡ ಕಾರಣ ಆ ಪರಶಿವನ ಹೃದಯದಲ್ಲಿ ಅಡಗಿ ಹೋದೆನು. ವೈವಿಧ್ಯಮಯ ಜೀವನ–ಅರ್ಥ–ಅನುಭವಗಳ ಸಂಕೇತವಾಗಿರುವ ಸಂಸಾರದ ಕದಳಿ ಎಂಬುದನ್ನು ಗೆದ್ದು ಕದಳಿ ವನದಲ್ಲಿ ಶಿವನ ಸಾಕ್ಷಾತ್ಕಾರವನ್ನು ಪಡೆದ ಸಂದರ್ಭದ ವಿವರಗಳು ಇಲ್ಲಿವೆ.

'ಕುಲಗಿರಿಯ ಶಿಖರದ ಮೇಲೆ ಬೆಳೆವುದಯ್ಯಾ ಎಂದಡೆ,
ಬಾಳೆ ಬೆಳೆವುದಯ್ಯಾ ಎನಬೇಕು
ಓರೆಗಲ್ಲ ನುಗ್ಗುಗಟ್ಟಿ ಮೆಲಬಹುದಯ್ಯಾ ಎಂದಡೆ
ಅದು ಅತ್ಯಂತ ಮೃದು ಮೆಲಬಹುದಯ್ಯಾ ಎನಬೇಕು
ಸಿಕ್ಕದ ಠಾವಿನಲ್ಲಿ ಉಚಿತವ ನುಡಿವುದೆ ಕಾರಣ
ಚನ್ನಮಲ್ಲಿಕಾರ್ಜುನ ಮರ್ತ್ಯಕ್ಕೆ ಬಂದು ದಕ್ಕಿದೆ ಗೆಲುವು'

ಇಲ್ಲಿ ದೊಡ್ಡ ಪರ್ವತದ ಮೇಲೆ ಬಾಳೆ ಬೆಳೆಯುತ್ತದೆ ಎಂದರೆ ಬೆಳೆಯುವುದಯ್ಯಾ ಎನ್ನಬೇಕು. ಓರೆಯಾಗಿರುವ ಕಲ್ಲನ್ನು ನುಚ್ಚುನೂರಾಗಿಸಿ ಪುಡಿಮಾಡಬಹುದು ಎಂದರೆ ಹೌದು ಅದು ಅತ್ಯಂತ ಮೃದುವಾಗಿರುತ್ತದೆ ಎನ್ನಬೇಕು. ಸತ್ಯಕ್ಕೆ ಬೆಲೆ ಸಿಗದ ಸ್ಥಳದಲ್ಲಿ ಅನುಚಿತವಾದುದನ್ನು ಹೇಳಲೇಬೇಕು ಯಾಕೆಂದರೆ ಈ ಭೂಮಿಯಲ್ಲಿ ಹುಟ್ಟಿ ಬಂದ ಮೇಲೆ ಮೂರ್ಖರೊಂದಿಗೆ ಇಂತಹ ಮಾತುಗಳನ್ನು ಆಡಿದರೆ ಮಾತ್ರ ಗೆಲುವು ಸಾಧ್ಯ ಎಂದು ಹೇಳಿದ್ದಾಳೆ.

ಕಲ್ಯಾಣದ ದಾರಿಯಲ್ಲಿ ಸಾಗುವಾಗ ಅಕ್ಕನು –
'ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ

ಸಿಹಿನೀರೆರೆದವರಾರಯ್ಯಾ?....' ಎಂದು ನಿಸರ್ಗದ ವೈಶಿಷ್ಟ್ಯವನ್ನು ಹೇಳುತ್ತಾಳೆ. ಅಕ್ಕನಿಗೆ ಕದಳಿಯ ವನದ ಬಗೆಗೆ ಅತಿಯಾದ ವ್ಯಾಮೋಹ ಹಾಗೂ ಪ್ರೀತಿಯಿತ್ತು. ಕಾಯವೆಂಬ ಕದಳಿಯ ಮೂಲಕ ಶ್ರೀಶೈಲದಲ್ಲಿರುವ ಚನ್ನಮಲ್ಲಿಕಾರ್ಜುನನ ಕಾಣ ಹೊರಟ ಅಕ್ಕನಿಗೆ ಎಲ್ಲವೂ ಶಿವಮಯವಾಗಿ ಕಂಡಿತು ಎಂಬುದನ್ನು –

'ವನವೆಲ್ಲಾ ಕಲ್ಪತರು ಗಿಡುವೆಲ್ಲಾ ಮರುಜೇವಣಿ
ಶಿಲೆಗಳೆಲ್ಲಾ ಪರುಷ ನೆಲವೆಲ್ಲಾ ಅವಿಮುಕ್ತ ಕ್ಷೇತ್ರ
ಜಲವೆಲ್ಲಾ ನಿರ್ಜರಾಮೃತ ಮೃಗವೆಲ್ಲಾ ಪುರುಷಾಮೃಗ
ಎಡರುವ ಹರಳೆಲ್ಲಾ ಚಿಂತಾಮಣಿ
ಚನ್ನಮಲ್ಲಿಕಾರ್ಜುನನ ನೆಚ್ಚಿನ ಗಿರಿಯ ಸುತ್ತಿ
ನೋಡುತ ಬಂದು ಕದಳಿಯ ಬನವ ಕಂಡೆ'

ಅಲ್ಲಮನ ಈ ಕೆಳಗಿನ ವಚನವು ಮನುಷ್ಯನ ಬದುಕಿನಲ್ಲಿ ಕಾಮವು ಎಷ್ಟು ಮೂಲಭೂತವಾದುದು ಹಾಗೂ ಅನಿವಾರ್ಯವಾದುದು ಎಂಬ ಸತ್ಯವನ್ನು ಹೇಳುತ್ತದೆ. ಇಲ್ಲಿ ಬಾಳೆಯ ಹಣ್ಣು ಹಾಗೂ ಸರ್ಪವನ್ನು ಪ್ರತಿಮೆಯಾಗಿ

ಬಳಸಲಾಗಿದೆ. ಇದನ್ನು ಮನಸ್ಸಿನ ಹತೋಟಿಯ ಮೂಲಕ ಮೀರಬೇಕಾದುದನ್ನು ಆತನು ಹೇಳುತ್ತಾನೆ. ದೇಹವು ವಿಷಯಾದಿ ಸುಖಗಳನ್ನು ಇಚ್ಛಿಸಿದಾಗ ಭಕ್ತಿಜ್ಞಾನ ಉದಯದ ಮೂಲಕ ಜ್ಞಾನಮಾರ್ಗದಲ್ಲಿ ನಡೆದು ಮೋಕ್ಷಾಸಕ್ತನಾಗಿ ಆನಂದದಲ್ಲಿ ಲೀನನಾಗುವುದು ಅಗತ್ಯ ಎಂದು ಹೇಳುತ್ತಾನೆ:

'ಹೃದಯದ ಬಾವಿಯ ತಡಿಯಲ್ಲಿ
ಒಂದು ಬಾಳೆ ಹುಟ್ಟಿತ್ತಲ್ಲಾ
ಆ ಬಾಳೆಯ ಹಣ್ಣ ಮೆಲ ಬಂದ
ಸರ್ಪನ ಪರಿಯ ನೋಡಾ
ಬಾಳೆ ಬೀಗಿ ಸರ್ಪನೆದ್ದರೆ
ನಿರಾಳ ಕಾಣಾ ಗುಹೇಶ್ವರಾ'

ಅಲ್ಲಮನು ಪರಮ ಜ್ಞಾನ ಸಿದ್ಧಿಯ ರಹದಾರಿ ಕಾಯವೆಂಬ ಕದಳಿ ಎಂಬುದನ್ನು ಹೀಗೆ ಹೇಳಿದ್ದಾನೆ:

'ತ್ರಿಭುವನ ಗಿರಿಯೆಂಬ ಪರ್ವತವನೇರಿ
ಕಾಯವೆಂಬ ಕದಳಿಯ ಹೊಕ್ಕು ಸುಳಿದಾಡುವ
ಪರಮಾನಂದದ ಮಹಾಮಹಿಮಂಗೆ
ಇಹವೇನು? ಪರವೇನು?'

ಅಂತೆಯೇ, '...ನಮಗೆ ಕದಳಿಯಲ್ಲಿ ಹೊಕ್ಕು ನಿಜದಲ್ಲಿ ಒಡಗೂಡುವ ಪರಿಣಾಮ!...' ಈ ವಚನದಲ್ಲೂ ಅಲ್ಲಮನು ಬಸವಣ್ಣ, ಚನ್ನಬಸವಣ್ಣ ಮೊದಲಾದ ಸಕಲ ಶರಣ ಶರಣೆಯರಿಗೂ ಕಾಯಸಹಿತ ಕೈಲಾಸವೇರಲು ಕರೆಕೊಟ್ಟು, ಕಾಯವೆಂಬ ಕದಳಿಯ ಮೂಲಕ ಹೋಗಲು ಹೇಳಿ ತಾನೂ ಕಾಯವೆಂಬ ಕದಳಿಯಲ್ಲಿ ಅಂತರ್ಗತನಾಗುವುದಾಗಿ ಹೇಳುತ್ತಾನೆ. ಇದು ಕಾಯವೆಂಬ ಕದಳಿಗೆ ಕೊಟ್ಟಿರುವ ಮಹತ್ವವನ್ನು ಹೇಳುತ್ತದೆ.
ಬಸವಣ್ಣನವರ ವಚನಗಳಲ್ಲಿ ಬರುವ ಬಾಳೆಯ ದೃಷ್ಟಾಂತ, ಉಪಮೆ, ರೂಪಕಗಳು ಅತ್ಯಂತ ಅರ್ಥಗರ್ಭಿತವೂ ಸತ್ವಪೂರ್ಣವೂ ಆಗಿದೆ. ಬಸವಣ್ಣನವರ ಮೂರು ವಚನಗಳಲ್ಲಿ 'ಬಾಳೆ' ಎಂಬ ಪದಪ್ರಯೋಗವಿದೆ.

'ಚೇಳಿಂಗೆ ಬಸುರಾಯಿತ್ತೆ ಕಡೆ;
ಬಾಳೆಗೆ ಫಲವಾಯಿತ್ತೆ ಕಡೆ, ನೋಡಾ!
ರಣರಂಗದಲ್ಲಿ ಕಾದುವ ಓಲೆಯಕಾರಂಗೆ ಓಸರಿಸಿತ್ತೆ ಕಡೆ!
ಮಾಡುವ ಭಕ್ತಂಗೆ ಮನಹೀನವಾದರೆ ಅದೇ ಕಡೆ,
ಕೂಡಲಸಂಗಮದೇವಾ!'

ಈ ವಚನದಲ್ಲಿ 'ಬಾಳೆ' ದೃಷ್ಟಾಂತ ಮತ್ತು ಉಪಮೆಯಾಗಿ ಪ್ರಯೋಗವಾಗಿದೆ. ಭಕ್ತನ ಮನಸ್ಸು ಭಕ್ತಿ ಮಾಡುವಲ್ಲಿ ಆನಂದ ಹಾಗೂ ಉತ್ಸಾಹದಿಂದಿರಬೇಕೇ ಹೊರತು ಹೀನವಾಗಿರಬಾರದು. ಮತ್ತೊಂದೆಡೆ ಬಸವಣ್ಣನವರು ಸರ್ವ ಅವಯವಗಳ ಚೇಷ್ಟೆಗೆ ಮನವೇ ಬೀಜ ಎಂದಿದ್ದಾರೆ. ಮನ ಶುದ್ಧವಿರಬೇಕು, ಮನಸ್ಸು ಶುದ್ಧವಾಗಲು ಭಕ್ತಿ ಬೇಕು. ಎಲ್ಲ ಕಾರ್ಯಗಳಿಗೆ ಮನಸ್ಸೇ ಮೂಲವಾದುದು. ಮನಸ್ಸು ಹೀನವಾದರೆ ಭಕ್ತಿ ಮಾಡಲು ಸಾಧ್ಯವಿಲ್ಲ. ಮನಹೀನವಾದ ಕ್ಷಣವೇ ಭಕ್ತಿ ಅವನಿಂದ ಬಿಟ್ಟು ಹೋಗುವುದು. ಇಲ್ಲಿ ಭಕ್ತನ ಭಕ್ತಿಗೆ ಮನಹೀನನಾಗುವುದೇ ಕಡೆ, ಚೇಳಿಗೆ ಬಸುರಾಗುವುದು ಕಡೆ, ಬಾಳೆ ಫಲ ಕೊಡುವುದು ಕಡೆ, ಯುದ್ಧಭೂಮಿಯಲ್ಲಿ ಕಾದುವ ವೀರ ಹಿಂಜರಿಯುವುದು ಕಡೆ ಎಂಬ ದೃಷ್ಟಾಂತಗಳನ್ನು ಭಕ್ತಿಯನ್ನು ಸಮರ್ಥಿಸಲು ಬಸವಣ್ಣನವರು ಕೊಟ್ಟಿದ್ದಾರೆ.

'ಲಿಂಗವ ಪೂಜಿಸಿದ ಬಳಿಕ ಜಂಗಮಕ್ಕಂಜಲೇಬೇಕು
ದಕ್ಕ ನುಂಗಿದಂತೆ ಬೆವೆತುಕೊಂಡಿರಬೇಡ;
ಬೀಗಿ ಬೆಳೆದ ಗೊನೆವಾಳೆಯಂತೆ ಬಾಗಿಕೊಂಡಿದ್ದಡೆ
ಬೇಡಿದ ಪದವಿಯನೀವ ಕೂಡಲಸಂಗಮದೇವ'

ಇಲ್ಲಿ ಬಾಳೆಯನ್ನು ಸೂಚ್ಯವಾಗಿ ತನುವಿಗೆ ಹೋಲಿಸಲಾಗಿದೆ. ಲಿಂಗ–ಜಂಗಮದಲ್ಲಿ ಬೇಧವಿರಬಾರದೆಂದು ಜಂಗಮನಿಗೆ ಭಕ್ತ ಅಂಜಲೇಬೇಕೆಂದು ಹೇಳುತ್ತಾರೆ. ಗೊನೆ ಬಿಟ್ಟ ಬಾಳೆ ಬಾಗಿಕೊಂಡಿರುವಂತೆ ಮಾನವನು ವಿನಯವಂತನಾಗಿರಬೇಕು ಹಾಗಾದಾಗ ಮಾತ್ರ ಶಿವ ಒಲಿಯುವುದು ಸಾಧ್ಯ ಎಂಬ ಭಾವವಿದೆ.

'ಮಾಡುವ ಭಕ್ತನ ಕಾಯ ಬಾಳೆಯ ಕಂಭದಂತಿರಬೇಕು
ಮೆಲ್ಲಮೆಲ್ಲನೆ ಹೊರೆಯೆತ್ತಿ ನೋಡಿದರೆ
ಒಳಗೆ ಕೆಚ್ಚಿಲ್ಲದಿರಬೇಕು
ಮೇಲಾವ ಫಲವ ನಮ್ಮವರು ಬೀಜ ಸಹಿತ ನುಂಗಿದರು;
ಎನಗಿನ್ನಾವ ಭವವಿಲ್ಲ, ಕಾಣಾ,
ಕೂಡಲಸಂಗಮದೇವಾ'

ಈ ವಚನದಲ್ಲಿ 'ಕದಳಿ' ಎಂಬ ರೂಪಕವನ್ನು ದೇಹಕ್ಕೆ ಹೋಲಿಸಲಾಗಿದೆ. ಇಲ್ಲಿ ಬಾಳೆಗೂ ಭಕ್ತನಿಗೂ ಅಭೇದ ಕಲ್ಪಿಸಲಾಗಿದೆ. ಭಕ್ತನ ಕಾಯ ಮಿದುವಾದ ಬಾಳೆಯ ಕಂಬದಂತಿರಬೇಕು. ಬಾಳೆಯ ಕಂಬವನ್ನು ಸುಲಿಯುತ್ತಾ ಹೋದಂತೆ ಏನೂ ಉಳಿಯುವುದಿಲ್ಲ. ಹಾಗೆಯೇ ಮನುಷ್ಯನ ಕಾಯವೂ ಅಂಗಭಾವ ಮನೋಭಾವವಳಿದು ಅಕಾಯವಾಗಬೇಕು. ಹಣ್ಣು ಭವವಿಲ್ಲದ್ದು ಭಕ್ತನ ಹಾಗೆ. ಈ ಭಕ್ತನೆಂಬ ಬಾಳೆಹಣ್ಣನ್ನು ಶಿವ ನುಂಗಿದಾಗ ಇಲ್ಲಿರುವ ಶಿವಭಕ್ತನಿಗೆ ಯಾವ ಭಯವೂ ಉಳಿಯುವುದಿಲ್ಲ ಬಾಳೆಯ ದಿಂಡು ಅಳಿದರೂ ಹಣ್ಣು ನಿರಂತರವಾಗಿರುತ್ತದೆ. ಅದರಂತೆ ಭಕ್ತನು ಅಮರ. ಅವನು ಹುಟ್ಟು ಸಾವುಗಳನ್ನು ಗೆದ್ದವನು. ಅವನ ಕಾಯ ಮರೆಯಾದರೂ ಅವನ ಭಕ್ತಿ ಮರೆಯಾಗದು.
'ಕದಳಿ' ಎಂಬ ಸಂಸ್ಕೃತ ಶಬ್ದಕ್ಕೆ ಕನ್ನಡದ ಸಮಾನಾರ್ಥ ಪದ 'ಬಾಳೆ'. ಆದರೆ ವಚನಗಳಲ್ಲಿ ಬಳಕೆಗೊಂಡಿರುವ 'ಕದಳಿ' ಪದಕ್ಕೆ 'ಕದಳಿ' ಎಂಬ ವಾಚ್ಯಾರ್ಥ ಸರಿಹೊಂದುವುದಿಲ್ಲ. ಆದರೆ ಹೇಗೆ ಕದಳಿಯ ಪ್ರತಿ ಅಂಗವೂ ಶಿವಾರ್ಪಿತವಾಗುವುದೋ ಹಾಗೆಯೇ, ಕಾಯವೆಂಬ ಕದಳಿಯ ಪ್ರತಿ ಅಂಗವೂ ಶಿವಸಿದ್ಧಿಯನ್ನು ಪಡೆದಾಗ ಕಾಯವು ಶಿವೈಕ್ಯವಾಗುತ್ತದೆ.
ಹೀಗೆ ಅಕ್ಕ, ಅಲ್ಲಮ ಮತ್ತು ಬಸವಣ್ಣನವರ ವಚನಗಳಲ್ಲಿ 'ಕದಳಿ' ಎಂಬ ಪದಕ್ಕೆ ಮುಖ್ಯವಾಗಿ 'ಕಾಯ' ಎಂಬ ಅರ್ಥವಿದೆ. ಕೆಲವೆಡೆ 'ಮಾರ್ಗ' ಎಂಬ ಅರ್ಥವೂ ಇದೆ. ಅವರು ಕದಳಿ ಪದಕ್ಕೆ ಕರ್ಮ, ಕಾಯ, ಮಾಟ, ಭಾವ, ತನು, ಮನ, ಭವ, ಘೋರಾರಣ್ಯ, ವಿಷಯಾಪೇಕ್ಷೆ ಇವೇ ಮೊದಲಾದ ಅರ್ಥಗಳನ್ನು ನೀಡುವುದರ ಮೂಲಕ ಬಳಸಿಕೊಂಡಿದ್ದಾರೆ. 'ಕದಳಿ' ಎನ್ನುವುದು ಒಂದು ಜಾತಿಯ ಬಾಳೆ. ಬಾಳೆಯ ಗಿಡದಲ್ಲಿ ಯಾವುದೂ ವ್ಯರ್ಥವಿಲ್ಲ, ಪ್ರತಿಯೊಂದೂ ಉಪಯೋಗಕ್ಕೆ ಬರುತ್ತದೆ. ಫಸಲು ಬಂದು ಬೆಳೆದ ನಂತರ ಬಾಳೆಯ ಗಿಡವನ್ನು ಕಡಿಯುತ್ತಾರೆ. ಆದರೆ ಬೇರಿನ ಗಡ್ಡೆಯಿಂದ ಹೇಗೆ ಮತ್ತೆ ಮತ್ತೆ ಗಿಡಗಳು ಹುಟ್ಟುತ್ತವೆಯೋ ಹಾಗೆಯೇ ಮನುಷ್ಯನ ಭವದ ಚಕ್ರವೂ. ಭವದ ಜೀವ ಬೆಳೆಸುತ್ತ ತಾನೂ ಭವದಲ್ಲಿ ಸಿಲುಕಿಕೊಂಡು ನಮ್ಮ ಬದುಕು ಮುಂದುವರಿಯುತ್ತಾ ಸಾಗುತ್ತದೆ. ಆದರೆ ಈ ಭವದಿಂದ ಬಿಡುಗಡೆ ಹೊಂದುವ ಮಾರ್ಗವನ್ನು ಅರಿತುಕೊಳ್ಳಬೇಕು.
ಒಂದು ಬಾಳೆ ಹಲವು ಬಾಳೆಯಾದಂತೆ ಒಮ್ಮೆ ವಿಷಯದ ರುಚಿ ಪಡೆದ ಮನುಷ್ಯನ ಮನವು ಹಲವು ವಿಷಯಗಳತ್ತ ಎಳಸುತ್ತ ಹೋಗುತ್ತದೆ. ಕದಳಿಯೆಂಬ ಮನಸ್ಸಿನ ಶೋಧನೆಯ ಮೂಲಕ ಕದಳಿಯ ಬನದಲ್ಲಿ ಮನಸ್ಸನ್ನು ಹಿಡಿದಿಟ್ಟುಕೊಳ್ಳುವ ಮೂಲಕ ಐಕ್ಯರಾಗುವುದು ಹೇಗೆಂಬುದನ್ನು ವಚನಕಾರರು ನಿವೇದಿಸಿದ್ದಾರೆ. ಇಲ್ಲಿ ಕಾಯವೆಂಬ ಕದಳಿಯ ನಿರಾಕರಣೆಯನ್ನು ಶರಣರು ಮಾಡುವುದಿಲ್ಲ, ಬದಲಾಗಿ, ಕಾಯವನ್ನು ಗೆದ್ದು ಭವ ಮುಕ್ತರಾಗುವುದು ಹೇಗೆಂಬುದನ್ನು ಹೇಳುತ್ತಾರೆ.

ಈ ಪ್ರಬಂಧದಲ್ಲಿ ವಚನಗಳಲ್ಲಿ ಪ್ರಯೋಗವಾದ 'ಕದಳಿ' ಎಂಬ ಸಸ್ಯ ರೂಪಕವಿರುವ ಎಲ್ಲ ವಚನಗಳನ್ನು ಬಳಸಲಾಗಿದೆ ಎಂದು ಹೇಳಲಾಗದು. ಆದರೆ ಅಕ್ಕ, ಅಲ್ಲಮ ಮತ್ತು ಬಸವಣ್ಣ ಕದಳಿಯನ್ನು ರೂಪಕವನ್ನಾಗಿ ಬಳಸಿಕೊಂಡ ಬಗೆಗೆ ಹಾಗೂ ಈ ಪದ ಪ್ರಯೋಗದ ಮೂಲಕ ಅಂತರಂಗವನ್ನು ಶೋಧಿಸಿದ ರೀತಿಯ ಕುರಿತಾಗಿ ಒಂದು ಸ್ಪಷ್ಟ ಕಲ್ಪನೆ ಉಂಟಾಗುತ್ತದೆ.

**ಪರಾಮರ್ಶನ ಕೃತಿಗಳು:**


1. ಅನ್ನದಾನೀಶ್ವರ ಮಹಾಸ್ವಾಮಿಗಳು ಮಹಾದೇವಿಯಕ್ಕನ ವಚನ – ಚಿಂತನ. ಮೈಸೂರು: ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ. (2001).
2. ಸಿ. ಕೆ. ಸಾವಲಗಿ. ವಚನಸಾಹಿತ್ಯ ಮತ್ತು ಜಾನಪದ. ಬೆಂಗಳೂರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. (1997).
3. ನಾರಾಯಣ ಪಿ. ವಿ. ವಚನ ಪರಿಸರ. ಬೆಂಗಳೂರು: ತಂಗಾಳಿ ಪ್ರಕಾಶನ. (1994).
4. ರಹಮತ್ ತರೀಕೆರೆ (ಸಂ.). ಅಕ್ಕಮಹಾದೇವಿ ವಚನಗಳು. ಹಂಪಿ: ಪ್ರಸಾರಾಂಗ – ಕನ್ನಡ ವಿಶ್ವವಿದ್ಯಾನಿಲಯ. (2005).
5. ಲೀಲಾವತಿ ಆರ್. ಪ್ರಸಾದ್. ಅಕ್ಕಮಹಾದೇವಿ ಚರಿತೆ. ಬೆಂಗಳೂರು: ಸ್ನೇಹ ಬುಕ್ ಹೌಸ್. (2015).
6. ವಿಜಯಕುಮಾರ ಮಹಾನುಭಾವಿಗಳು. ಪ್ರಭುದೇವರ ವಚನ ವ್ಯಾಖ್ಯಾನ. ಬೆಂಗಳೂರು: ಪ್ರಭು ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್. (2004).
7. ವಿಜಯಕುಮಾರ ಮಹಾನುಭಾವಿಗಳು. ಅಕ್ಕಮಹಾದೇವಿಯವರ ವಚನ ವ್ಯಾಖ್ಯಾನ. ಬೆಂಗಳೂರು: ಪ್ರಭು ಪ್ರಿಂಟರ್ಸ್ ಮತ್ತು ಪಬ್ಲಿಷರ್ಸ್. (2004).